# ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡ

## ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ

**ಪ್ರಸ್ತಾವನೆ :** ಯಾರಾದರೂ ಸ್ವಂತ ವ್ಯವಹಾರವನ್ನು ಸ್ಥಾಪಿಸುವದಕ್ಕೆ ಕೆಲವೊಂದು ಸಾಮರ್ಥ್ಯಗಳಿರಬೇಕಾಗುತ್ತದೆ. ಯಾರು ಉದ್ಯಮಶೀಲನಾಗುವ ತೀವ್ರವಾದ ಆಸಕ್ತಿಯನ್ನು ಹೊಂದಿರುತ್ತಾರೋ ಅವರಲ್ಲಿಯ ಸಾಮರ್ಥ್ಯಗಳನ್ನು ಪ್ರಬಲಗೊಳಿಸಿ ಅವರನ್ನು ಉದ್ಯಮಶೀಲರನ್ನಾಗಿ ಮಾಡಬಹುದು. ಈ ತತ್ವದ ಆಧಾರದ ಮೇಲೆ ಆಯಾ ಪ್ರದೇಶದ ಪರಿಸ್ಥಿತಿ ಹಾಗೂ ಸಂಪನ್ಮೂಲಗಳಿಗೆ ಸರಿಹೊಂದುವಂತೆ ಸಂಭಾವ್ಯ ಉದ್ಯಮಶೀಲರನ್ನು ಅಭಿವೃದ್ಧಿಪಡಿಸುವ ಹಾಗೂ ಅವರಲ್ಲಿರುವ ಉದ್ಯಮಶೀಲತೆಯ ವಿಚಾರಗಳನ್ನು ಉತ್ಪಾದನೆ ಹಾಗೂ ಸೇವಾ ಕ್ಷೇತ್ರಗಳಲ್ಲಿ ವಾಣಿಜ್ಯಾತ್ಮಕ ಉದ್ಯಮಗಳನ್ನಾಗಿ ಪರಿವರ್ತಿಸಲು ಸಹಾಯ ಮಾಡುವ ಗುರಿಯನ್ನು ಹೊಂದಿದೆ. ವ್ಯವಸ್ಥಿತ ತರಬೇತಿಯ ಮುಖಾಂತರ ಸಹಾಯ ಮಾಡುವ ಉದ್ದೇಶವನ್ನು ಹೊಂದಿ ಉದ್ಯಮದ ನಿರ್ಮಾಣ, ಉದ್ಯಮಶೀಲ ಅವಕಾಶಗಳನ್ನು ಗುರುತಿಸುವಿಕೆಯಿಂದ ಪ್ರಾರಂಭಿಸಿ, ಉದ್ಯಮಶಿಲ ಸಾಮರ್ಥ್ಯ ಹಾಗೂ ಕೌಶಲ್ಯಗಳನ್ನು ಪ್ರಬಲಗೊಳಿಸುವದು ಹಾಗೂ ಅವುಗಳನ್ನು ಉದ್ಯಮವನ್ನು ವ್ಯವಸ್ಥಿತವಾಗಿ ನಡೆಸುವದಕ್ಕೆ ತಮ್ಮಲ್ಲಿ ಅಳವಡಿಸಿಕೊಳ್ಳುವ ವಿಷಯಗಳನ್ನು ಈ ತರಬೇತಿಯಲ್ಲಿ ಅಳವಡಿಸಲಾಗಿದೆ. ಈ ತರಬೇತಿಯ ಅಭ್ಯರ್ಥಿಗಳು ಸಮಾಲೋಚನೆ ಹಾಗೂ ಸಲಹಾ ಸೇವೆಗಳ ಮುಖಾಂತರ ಈ ಯೋಜನೆಯ ಅನುಷ್ಠಾನಕ್ಕೆ ಸಹಾಯಕಾರಿಯಾಗುವದು.

**ಉದ್ದೇಶಗಳು :** **ಈ ಕಾರ್ಯಕ್ರಮದ ಉದ್ದೇಶಗಳು ಕೆಳಗಿನಂತಿವೆ ;**

- ಉದ್ಯಮಶೀಲಗಳ ಅವಕಾಶಗಳ ಬಗ್ಗೆ ಸ್ಪಷ್ಟತೆಯನ್ನು ನೀಡುವದು.
- ಉದ್ಯಮಶೀಲ ಸಾಮರ್ಥ್ಯಗಳನ್ನು ಹರಿತಗೊಳಿಸಲು ಅವಕಾಶಗಳನ್ನು ಸೃಷ್ಟಿಸುವದು.
- ಯೋಜನೆಯ ಕಾರ್ಯಸಾಧ್ಯತೆ ಹಾಗೂ ಸ್ಥಿರತೆಗೆ ಸಂಬಂಧಿಸಿದ ಮುಖ್ಯಾಂಶಗಳು, ಹಣಕಾಸಿನ ಅಂಶಗಳು.
- ಸಣ್ಣ ಉದ್ಯಮವನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡುವ ಬಗ್ಗೆ ತಿಳುವಳಿಕೆಯನ್ನು ನೀಡುವದು.
- ಮಾರಾಟ ಹಾಗೂ ಮಾರುಕಟ್ಟೆ ಕೌಶಲ್ಯ ಹಾಗೂ ತಂತ್ರಗಳನ್ನು ತಿಳಿಸುವದು.
- ಉದ್ಯಮವನ್ನು ಯಶಸ್ವಿಯಾಗಿ ನಡೆಸುವ ಬಗ್ಗೆ ಮಾರ್ಗದರ್ಶನ ಹಾಗೂ ಬೆಂಬಲ ಸೇವೆಯನ್ನು ಒದಗಿಸುವದು.

**ನಿಗದಿತ ಗುಂಪು** : **ಭಾವಿ ಉದ್ಯಮಶೀಲರು/ನಿರುದ್ಯೋಗಿ ಯುವಕರು.**

**ಅವಧಿ** : **10 ದಿನಗಳು.**

**ವಿಧಾನ** : ವರ್ಗದ ಭೋಧನೆ ಹಾಗೂ ವಿಚಾರ ವಿನಿಮಯ.
ಗುಂಪು ಚರ್ಚೆ
ನಿದರ್ಶನಗಳ ಅಧ್ಯಯನ.
ಅಭ್ಯಾಸ ವಿಧಾನ ಮತ್ತು ವಿಶ್ಲೇಷಣೆ
ಪಾತ್ರಗಳ ನಿರ್ವಹಣೆ, ಇತ್ಯಾದಿ.

**ಅನುಕೂಲತೆಗಳು** : ಈ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳುವದಕ್ಕೆ ಪ್ರೇರಣೆಯನ್ನು ಒದಗಿಸುವದಕ್ಕೆ ಸಹಾಯ ಮಾಡುತ್ತವೆ. ಈ ಕಾರ್ಯಕ್ರಮಗಳು ಅಭ್ಯರ್ಥಿಗಳ ಉದ್ಯಮಶೀಲತಾ ಹಾಗೂ ವ್ಯವಸ್ಥಾಪನಾ ಸಾಮರ್ಥ್ಯಗಳನ್ನು ಹರಿತಗೊಳಿಲು, ಉದ್ಯಮಶೀಲಗಳ ಅವಕಾಶಗಳ ಬಗ್ಗೆ ಸ್ಪಷ್ಟತೆ,ಮಾರಾಟ ಹಾಗೂ ಮಾರುಕಟ್ಟೆ ಕೌಶಲ್ಯ ಹಾಗೂ ತಂತ್ರ, ಕಾನೂನು ಮತ್ತು ಕಾಯಿದೆಗಳನ್ನು ಅರ್ಥೈಸಿಕೊಳ್ಳುವದು ಇತ್ಯಾದಿ ವಿಷಯಗಳು ಉದ್ಯಮವನ್ನು ಯಶಸ್ವಿಯಾಗಿ ನಿರ್ವಹಣೆ ಮಾಡಲು ಹಾಗೂ ನಡೆಸುವದಕ್ಕೆ ಅತಿಅವಶ್ಯಕವಾಗಿವೆ.

**ಕಾರ್ಯಕ್ರಮದ ವಿಷಯಗಳು :**

**ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ :**

| ದಿನ | 1ನೇ ಅಧಿವೇಶನ | 2ನೇ ಅಧಿವೇಶನ | 3ನೇ ಅಧಿವೇಶನ | 4ನೇ ಅಧಿವೇಶನ |
|---|---|---|---|---|
| 1 | ನೋಂದಣಿ ಹಾಗೂ ಉದ್ಘಾಟನೆ | ಸೌಹಾರ್ದಯುತ ಸಂಬಂಧಗಳನ್ನು ಕಟ್ಟುವಿಕೆ ಹಾಗೂ ಉದ್ಯಮಶೀಲರು ಆನಂದಿಸುವ ಅಂಶಗಳು ಹಾಗೂ ಎದುರಿಸುವ ಸವಾಲುಗಳು. | ಉದ್ಯಮಶೀಲ ಸಾಮರ್ಥ್ಯಗಳನ್ನು ಅಳವಡಿಸಿಕೊಳ್ಳುವಿಕೆ : ಸಾರಯುತ ಕಾಲ್ಪನಿಕ ಪರೀಕ್ಷೆ (ಟಿ.ಎ.ಟಿ) | |
| 2 | ಉದ್ಯಮಶೀಲ ಸಾಮರ್ಥ್ಯಗಳನ್ನು ಅಳವಡಿಸಿಕೊಳ್ಳುವಿಕೆ : ತಮ್ಮ ಒಳಗಿನ ಸಂಪನ್ಮೂಲಗಳ ತಿಳುವಳಿಕೆ, ಸಮಸ್ಯ ಪರಿಹಾರ, ಸ್ವಯಂ ಪ್ರೇರಣಾ ಕಾರ್ಯ ಇತ್ಯಾದಿ (ಡಬ್ಲ್ಯು.ಎ.ಐ) | ಉದ್ಯಮಶೀಲ ಸಾಮರ್ಥ್ಯಗಳನ್ನು ಅಳವಡಿಸಿಕೊಳ್ಳುವಿಕೆ :<br>1) ಸಂವಹನೆ, ಮನವೊಲಿಸುವಿಕೆ ಮತ್ತು ವಿಚಾರ ವಿನಿಮಯ.<br>2) ನಾಯಕತ್ವ | ಉದ್ಯಮಶೀಲ ಸಾಮರ್ಥ್ಯಗಳನ್ನು ಅಳವಡಿಸಿಕೊಳ್ಳುವಿಕೆ : ಗಂಡಾಂತರ ಎದುರಿಸುವ ಮನೋಭಾವನೆ. (ಆರ್.ಟಿ.ಜಿ) | |
| 3 | ಸೃಜನಾತ್ಮಕತೆ ಹಾಗೂ ತಂಡ ಕಟ್ಟುವಿಕೆ | ಉದ್ಯಮಶೀಲ ಗುಣಲಕ್ಷಣಗಳು : ಉದ್ಯಮಶೀಲ ಮನೋಭಾವನೆ ಹಾಗೂ ಕೌಶಲ್ಯ | ಉದ್ಯಮ ಸ್ಥಾಪನೆಯ ಬಗ್ಗೆ ವ್ಯವಸ್ಥಿತ ವಿಧಾನದ ವಿವರಣೆ. | ಯೋಜನೆ ಗುರುತಿಸುವ ವಿಧಾನ |
| 4 | ಉದ್ಯಮಶೀಲ ಅವಕಾಶಗಳ ಮಾರ್ಗದರ್ಶನ | ಉದ್ಯಮಶೀಲ ಅವಕಾಶಗಳ ಮಾರ್ಗದರ್ಶನ | ಮಾರುಕಟ್ಟೆ ಸಮೀಕ್ಷೆ ಪ್ರಶ್ನಾವಳಿ ವಿವರಣೆ | ಯಶಸ್ವಿ ಉದ್ಯಮಶೀಲರಿಂದ ಪ್ರೇರಣೆ |
| 5 | ಯೋಜನಾ ವರದಿ ತಯಾರಿಕೆ | ಯೋಜನಾ ವರದಿ ತಯಾರಿಕೆ | ಮಾರುಕಟ್ಟೆ ಸಮೀಕ್ಷೆಗ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಣೆ | |
| 6 | ಅಭ್ಯರ್ಥಿಗಳಿಂದ ಯೋಜನಾ ವರದಿ ತಯಾರಿಕೆ | | ಉದ್ಯಮಶೀಲತೆಯ ಅಭಿವೃದ್ದಿಗೆ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ಪಾತ್ರ (ಹಣಕಾಸೇತರ) | ಉದ್ಯಮಶೀಲತೆಯ ಅಭಿವೃದ್ದಿಗೆ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ಪಾತ್ರ (ಹಣಕಾಸು) |
| 7 | ಉತ್ಪನ್ನದ ದರ ನಿಗದಿಪಡಿಸುವಿಕೆ ಹಾಗೂ ಅದಕ್ಕೆ ತಗಲುವ ವೆಚ್ಚ | ಲಾಭ-ನಷ್ಟ ರಹಿತ ವಿಶ್ಲೇಷಣೆ | ಉದ್ಯಮ ಸ್ಥಾಪನೆಗೆ ಅನ್ವಯಿಸುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾನೂನು/ಕಾಯಿದೆಗಳು. ಜಿ.ಎಸ್.ಟಿ, ಆದಾಯ ತೆರಿಗೆ ಇತ್ಯಾದಿ | ಸರಳ ಲೆಕ್ಕ ಪತ್ರ ಹಾಘೂ ಪುಸ್ತಕಗಳ ನಿರ್ವಹಣೆ. |
| 8 | ಸಣ್ಣ ಉದ್ದಿಮೆಗಳಿಗೆ ಕೈಗಾರಿಕಾ ಭೇಟಿ | | | |
| 9 | ಸಣ್ಣ ಉದ್ಯಮ ನಿರ್ವಹಣೆ | ದುಡಿಮೆ ಬಂಡವಾಳ ನಿರ್ವಹಣೆ | ಮಾರಾಟ ಮತ್ತು ಮಾರುಕಟ್ಟೆ ತಂತ್ರಗಳು, ಗ್ರಾಹಕರ ಮನೋಭಾವನೆ ಅರಿಯುವಿಕೆ ಹಾಗೂ ಗ್ರಾಹಕ ಸಂತೃಪ್ತಿ. | ಕಚ್ಚಾ ವಸ್ತು, ಸಾಮಗ್ರಿ ದಾಸ್ತಾನು ನಿರ್ವಹಣೆ |
| 10 | ಉದ್ಯಮ ವಿಸ್ತರಣೆ ಹಾಗೂ ಬೆಳವಣಿಗೆ, ತಂತ್ರಗಳು, ಪರಿಹಾರೋಪಾಯಗಳು ಹಾಗೂ ಮುನ್ನೆಚ್ಚರಿಕೆ ಕ್ರಮಗಳು | ಹಂತ ಹಂತವಾಗಿ ಉದ್ಯಮ ಅನುಷ್ಠಾನ ಹಾಗೂ ಸ್ಥಾಪನೆಗೆ ತಯಾರಿಸುವ ಕ್ರಿಯಾ ಯೋಜನೆ. | ಯಶಸ್ವಿ ಉದ್ಯಮಶೀಲರ ಅನುಭವ ಹಂಚಿಕೆ | ಗುಂಪು ಚರ್ಚೆ, ಮೌಲ್ಯಮಾಪನ ಮತ್ತು ಮುಕ್ತಾಯ |